ಪೀಠೋಪಕರಣಕ್ಕೆ ಮಾಡಿದ ಖರ್ಚುವೆಚ್ಚ ಇತ್ಯಾದಿ ಕಷ್ಟದುಃಖ ತೋಡಿಕೊಂಡ.

ಅಷ್ಟರಲ್ಲಿ ಕಾಯುತ್ತಾ ಕುಳಿತಿದ್ದ ಮುದುಕರೊಬ್ಬರು ದಢಕ್ಕನೆ ಎದ್ದರು, ಸಿಟ್ಟಿನಲ್ಲಿ ಕೆಂಡಾಮಂಡಲವಾಗಿ ಅವರು ಥರಥರನೆ ನಡುಗುತ್ತಿದ್ದರು. ಬಾಲ್ಡಿಯಾದ ಅವರ ತಲೆ ಹಿಂಭಾಗದಲ್ಲಿ ಅರ್ಧಚಂದ್ರಾಕಾರವಾಗಿ ಬೆರಳೆಣಿಕೆ ಕೂದಲುಗಳು ಜೋಲಾಡುತ್ತಿದ್ದವು, ಷೇವ್ ಮಾಡಿದ ನೆರಿಗೆ ಬಿದ್ದ ಕೆನ್ನೆ, ಮುಖ. ಮೂಗಿನಡಿ ಹಿಟ್ಲರ್ ಮೀಸೆ. ನೆರೆತ ಮೀಸೆ, ತಲೆ ಕೂದಲಿಗೆ ಡೈ ಮಾಡಿದ್ದರೂ ಬಿಳಿಬಣ್ಣದ ಕೂದಲು ಇಣುಇಣುಕಿ ಅಸ್ತಿತ್ವವನ್ನು ಜಗತ್ತಿಗೆ ಸಾರುತ್ತಿದ್ದವು. ಬತ್ತಿದ ಮಾವಿನ ಹಣ್ಣಿನ ಮುಖದ ಆ ಹಿರಿಯರು, ಹಿಂಬದಿ ತಲೆ ಕೂದಲ ಸವರಿ ತೋರುತ್ತಾ ಗಟ್ಟಿ ದನಿಯಲ್ಲಿ ಪ್ರಶ್ನಿಸಿದರು:

“ನನ್ನ ಕಟಿಂಗಿಗೂ ಒನ್‌ಫಿಫ್ಟಿಯೋ?”

“ಎಲ್ಲರ ಕಟಿಂಗಿಗೂ ಒಂದೇ, ನಮ್ಮದು ಫಿಕ್ಸೆಡ್ ರೇಟ್” ಖಡಾಖಂಡಿತವಾಗಿ ನುಡಿದ ಮೇಲ್ವಿಚಾರಕ.

“ಏನು, ಈ ನಾಲ್ಕು ಕೂದಲ ಕಟಿಂಗಿಗೂ ಒನ್ ಫಿಫ್ಟಿಯಾ? ಹಾಗಾದ್ರೆ ನಾನು ಕಟಿಂಗ್ ಮಾಡಿಸೋದೇ ಇಲ್ಲ, ಎದುರೊಂದು, ಹಿಂದೊಂದು ಕನ್ನಡಿ ಇಟ್ಟುಕೊಂಡು ಚೌರ ಮಾಡಿಕೊಳ್ಳಲು ನನ್ಗೆ ಗೊತ್ತುಂಟು! ಒನ್‌ಫಿಫ್ಟಿಯಂತೆ ಒನ್‌ಫಿಫ್ಟಿ. ಏನ್ ದುಡ್ಡು ಪುಕ್ಸಾಟೆ ಬರುತ್ತಾ? ಮನೆನಲ್ಲಿ ಅದೊಂದು ಶನಿ ಬೇರೆ, ನೀವೇ ಕಟಿಂಗ್ ಮಾಡಿಕೊಳ್ಳಬೇಡಿ, ಇಲಿ ತರದಾಂಗ್ದೆ ಕಾಣುತ್ತೆ... ಷಾಪಿಗೆ ಹೋಗಿ ಅಂತ ವರಾತ ಹಿಡಿದು ಬಲವಂತ ಮಾಡಿ ದೂಡುತ್ತೆ ದರಿದ್ರದ್ದು...” ಎನ್ನುತ್ತಾ ಆ ರೌದ್ರಾವತಾರಿ ಎ.ಸಿ. ಹಾಲ್ ಬಾಗಿಲು ತೆರೆದು ಬೀದಿಗಿಳಿದು ಮರೆಯಾದರು!

ಕನ್ನಡ ಆಡಲು ಸರಿಯಾಗಿ ಬರದ, ನನಗೆ ಸ್ಪಷ್ಟವಾಗಿ ಅರ್ಥವಾಗದ ಹಿಂದಿಯಲ್ಲಿ ಮಾತನಾಡುತ್ತಿದ್ದ “ದಿಲ್‌ಖುಷ್ ಹೇರಕಟ್ಟಿಂಗ್ ಸಲೂನ್” ಕೇಶಕೌಶಲಿಗಳನ್ನು ಎಲ್ಲಿಂದ ಬಂದವರೆಂದು ವಿಚಾರಿಸಿದೆ. ಅವರೆಲ್ಲರೂ ಬಿಹಾರದಿಂದ ಬಂದವರು. ಹೆಸರು ಕೇಳಿದೆ. ಶರ್ಮಾ, ಹುಸೇನ್ ಎಲ್ಲರೂ ಇದ್ದರು. ವಿಶೇಷವೆಂದರೆ ಸವಿತಾ ಸಮಾಜಕ್ಕೆ ಸೇರಿದವರು ಒಬ್ಬರೂ ಇರಲಿಲ್ಲ. ಸಲೂನಗಳಿಂದ ಸವಿತಾ ಸಮಾಜದ ಬರಹದ ಬೋರ್ಡ್‌ಗಳು ಯಾಕೆ ಮರೆಯಾದವೆಂಬ “ಕ್ಲೂ” ಸ್ಪಷ್ಟವಾಯಿತು. ಇದು ಸಮಾಜವಾದದ ಫಲವೋ? ಜಾತ್ಯತೀತ ರಾಷ್ಟ್ರ ನಿರ್ಮಾಣದ ಸಾಕಾರವೋ? ವಿಶ್ವಮಾನವ ಪ್ರಜ್ಞೆ ಜಾಗೃತಾವಸ್ಥೆಯೋ? ಇಲ್ಲಾ ಜಾಗತೀಕರಣದ ಪ್ರಭಾವವೂ?

ಎಲ್ಲ ಬಲ್ಲವರು ತಾವು ಹೇಳಬೇಕು!...

### ಶರತ್ ಕಲ್ಕೋಡ್

ಕನ್ನಡದ ವಿವಿಧ ವಾರ, ಮಾಸಪತ್ರಿಕೆಗಳ ಸಂಪಾದಕೀಯ ವಿಭಾಗದಲ್ಲಿ ಮೂರೂವರೆ ದಶಕಗಳ ಕಾಲ ಕಾರ್ಯನಿರ್ವಹಿಸಿ ನಿವೃತ್ತರು. ಮೂಲತಃ ಮಲೆನಾಡಿನ ಕೃಷಿಕ. ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಬರಹಗಳನ್ನು ಪ್ರಕಟಿಸಿದ್ದಾರೆ. ಇಂಗ್ಲಿಷ್, ಹಿಂದಿ, ತಮಿಳು, ತೆಲುಗು, ಮಲಯಾಳಂ ಭಾಷೆಗಳಿಗೆ ಇವರ ಕೆಲವು ಕೃತಿಗಳು ಅನುವಾದಗೊಂಡಿವೆ. ‘ಕಾಡೇ... ಗೂಡೇ..’ (ಕಾದಂಬರಿ), ‘ಆವರ್ತನ’, ‘ಕದರಡಿಕೆ’ (ಕಥಾಸಂಕಲನಗಳು), ‘ಅಂತರ’, ‘ಸಾಲು ಸಾಲು ಹಕ್ಕಿ ಸಾಲು’ (ಕವನ ಸಂಕಲನಗಳು), ಎಸ್.ಕೆ. ಕರೀಂಖಾನ್, ಗಿರೀಶ ಕಾಸರವಳ್ಳಿ (ವ್ಯಕ್ತಿಚಿತ್ರಗಳು), ‘ಸಿಂಗಾರ–ಬಂಗಾರ’ (ಅಡಿಕೆ ಕುರಿತ ಅಧ್ಯಯನ ಗ್ರಂಥ) – ಅವರ ಪ್ರಕಟಿತ ಕೃತಿಗಳು.